ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಳಗಾವಿ-591156

62ನೇ ಸಿಂಡಿಕೇಟ್ ಸಾಮಾನ್ಯ ಸಭೆ ಹಾಗೂ 2020ನೇ ಸಾಲಿನ 2ನೇ ಸಭೆಯ ನಡಾವಳಿಗಳು

ದಿನಾಂಕ : ಸೋಮವಾರ, 24-02-2020

ಸಮಯ : ಮಧ್ಯಾಹ್ನ 2:00 ಘಂಟೆ

ಸ್ಥಳ : ಸಿಂಡಿಕೇಟ್ ಸಭಾಂಗಣ,
ರಾ.ಚ.ವಿ., ಬೆಳಗಾವಿ

143

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 62ನೇ ಸಾಮಾನ್ಯ ಸಿಂಡಿಕೇಟ್ ಹಾಗೂ 2020ನೇ ಸಾಲಿನ 02ನೇ ಸಭೆಯನ್ನು ಸೋಮವಾರ ದಿನಾಂಕ 24 ಫೆಬ್ರವರಿ 2020 ರಂದು ಮಧ್ಯಾಹ್ನ 2.00 ಘಂಟೆಗೆ ನಡೆದ ಸಭೆಗೆ ಹಾಜರಿದ್ದ/ಹಾಜರಿರದ ಸದಸ್ಯರುಗಳ ವಿವರ.

I. ಹಾಜರಿದ್ದ ಸದಸ್ಯರು

1.	**ಪ್ರೊ. ಎಂ. ರಾಮಚಂದ್ರಗೌಡ**	**ಕುಲಪತಿಗಳು ಹಾಗೂ ಅಧ್ಯಕ್ಷರು**
2.	ಪ್ರೊ. ಕೆ.ಬಿ.ಚಂದ್ರಿಕಾ	ಸದಸ್ಯರು
3.	ಶ್ರೀ ನರಸಿಂಹ ರಾಯಚೂರ	ಸದಸ್ಯರು
4.	ಶ್ರೀ ಬಸವರಾಜ ಎನ್. ಚಿಕ್ಕನಗೌಡರ	ಸದಸ್ಯರು
5.	ಡಾ. ವ್ಹಿ.ಎಲ್. ಪೂಜಾರಿ	ಸದಸ್ಯರು
6.	ಪ್ರೊ. ಜೆ.ಸಿ.ಚಿಟ್‌ಕೂರ	ಸದಸ್ಯರು
7.	ಶ್ರೀ ಹನುಮಂತಪ್ಪ ಎಸ್. ಶಿಗ್ಗಾಂವ್	ಸದಸ್ಯರು
8.	ಡಾ. ಕೆ. ಶೇಷಮೂರ್ತಿ	ಸದಸ್ಯರು
9.	ಕು. ಶೋಭಾ ಹೂಗಾರ್	ಸದಸ್ಯರು
10.	ಡಾ. ಆನಂದ್ ಹೊಸೂರ್	ಸದಸ್ಯರು
11.	ಶ್ರೀ ಅಶೋಕ ಕೆ. ಕಬ್ಬೇರ್	ಸದಸ್ಯರು
12.	ಶ್ರೀ ಕಿರಣಕುಮಾರ್ ಡಿ. ದೇಸಾಯಿ	ಸದಸ್ಯರು
13.	**ಪ್ರೊ. ಎಸ್.ಎಂ. ಹುರಕಡ್ಲಿ**	**ಕುಲಸಚಿವರು(ಮೌ) ಹಾಗೂ ಸದಸ್ಯರು**
14.	**ಪ್ರೊ. ಬಸವರಾಜ ಪದ್ಮಶಾಲಿ**	**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು**

II. ಹಾಜರಾಗದ ಸದಸ್ಯರು:

1.	ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ	ಸದಸ್ಯರು
2.	ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ	ಸದಸ್ಯರು
3.	ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ	ಸದಸ್ಯರು
4.	ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ	ಸದಸ್ಯರು
5.	ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ	ಸದಸ್ಯರು

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಂಗಳೂರು-ಪೂನಾ ರಾ.ಹೆ.-4, ಬೆಳಗಾವಿ-591156

ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು

ವಿಷಯ: ದಿನಾಂಕ 24 ಫೆಬ್ರವರಿ 2020 ರಂದು ಜರುಗಿದ ವಿಶ್ವವಿದ್ಯಾಲಯದ ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡಾವಳಿಗಳು.

ಉಲ್ಲೇಖ: 1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (27)(28)(2)

2. ಮಾನ್ಯ ಕುಲಪತಿಗಳು ಸಭೆ ನಡೆಸಲು ನೀಡಿದ ಅನುಮೋದನೆ ದಿ: 13-02-2020

3. ಸಿಂಡಿಕೇಟ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 18-02-2020

ಪ್ರಸ್ತಾವನೆ

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (28)(2)ರ ಅನುಗುಣವಾಗಿ ಸಿಂಡಿಕೇಟ್ ಪ್ರಾಧಿಕಾರದ 62ನೇ ಸಭೆ ಆಯೋಜನೆ ಮಾಡಿ ಮಾನ್ಯ ಕುಲಪತಿಗಳು ಹಾಗೂ ಪ್ರಾಧಿಕಾರದ ಸಭಾಧ್ಯಕ್ಷರಾದ ಪ್ರೊ. ಎಂ. ರಾಮಚಂದ್ರಗೌಡ ಇವರು ಸಭೆಗೆ ಆಗಮಿಸಿದ ಎಲ್ಲ ಸದಸ್ಯರುಗಳನ್ನು ಸ್ವಾಗತಿಸಿದರು.

ಪ್ರಾಸ್ತಾವಿಕವಾಗಿ ಮಾನ್ಯ ಕುಲಪತಿಗಳು ಮಾತನಾಡುತ್ತಾ, 21-02-2020 ರಂದು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಸ್ಥಾಪಕ ಕುಲಪತಿಗಳಾದ ಪ್ರೊ. ಬಿ. ಆರ್. ಅನಂತನ್ ಅವರ ನಿಧನದ ವಾರ್ತೆಯು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪರಿವಾರಕ್ಕೆ ಅತೀವ ಅಘಾತವನ್ನು ತಂದೊಡ್ಡಿದೆ. ನಾಡಿನ ಹಿರಿಯ ಶಿಕ್ಷಣಪ್ರೇಮಿ, ಬುದ್ಧಿಜೀವಿ, ವಾಣಿಜ್ಯ ಹಾಗೂ ವ್ಯವಹಾರ ನಿರ್ವಹಣಾ ಶಾಸ್ತ್ರ ಕ್ಷೇತ್ರದ ಅಪ್ರತಿಮ ಸಂಶೋಧಕ ಹಾಗೂ ಸ್ನೇಹಶೀಲ ಸಂಘಟನಾ ಜೀವಿಯಾಗಿದ್ದ ಪ್ರೊ. ಬಿ. ಆರ್. ಅನಂತನ್ ಅವರು ತಮ್ಮ ಬಂಧು-ಬಳಗವನ್ನು ಹಾಗೂ ಅಪಾರ ಅಭಿಮಾನಿಗಳನ್ನು ಅಗಲಿರುವುದು ಅತೀವ ನೋವು ಹಾಗೂ ದುಃಖವನ್ನು ತಂದಿದೆ.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಬೌದ್ಧಿಕ, ಶೈಕ್ಷಣಿಕ, ಆಡಳಿತಾತ್ಮಕ ಹಾಗೂ ಸಾಂಸ್ಕೃತಿಕ ಸಂಸ್ಥಾಪಕ ರೂವಾರಿಗಳಾದ ಅವರ ಅನುಪಮ ಸೇವೆ ವಿಶ್ವವಿದ್ಯಾಲಯ ಅಸ್ತಿತ್ವದಲ್ಲಿರುವವರೆಗೂ ಸ್ಮರಣೀಯ ಹಾಗೂ ಶ್ಲಾಘನೀಯ. ವಿಶ್ವವಿದ್ಯಾಲಯವನ್ನು ಕಟ್ಟುವುದೆಂದರೆ ಗೋಡೆಗಳನ್ನು ಕಟ್ಟುವುದಲ್ಲ ಬದಲಾಗಿ ಬೌದ್ಧಿಕವಾಗಿ ಹಾಗೂ ಶೈಕ್ಷಣಿಕವಾಗಿ, ಆಡಳಿತಾತ್ಮಕವಾಗಿ ಅಲ್ಲದೆ ಶೈಕ್ಷಣಿಕವಾಗಿ ಕಟ್ಟಬಹುದು ಎನ್ನುವ ನಿದರ್ಶನವನ್ನು ಸಾಕ್ಷೀಕರಿಸಿಕೊಟ್ಟ ಅವರ ನಿಷ್ಕಾಮಸೇವೆ ಸದಾ ಅನುಕರಣೀಯವಾದದ್ದು. ಕಲ್ಪನೆಯನ್ನು ಸಾಂಸ್ಥಿಕರೂಪಕ್ಕೆ ತಂದು ಅದನ್ನು ಭೌತಿಕರೂಪಕ್ಕೆ ತರುವುದೆಂದರೆ ಅದು ಸಾಮಾನ್ಯದ ಮಾತಲ್ಲ. ಅಂತಹ ಅಸಮಾನ್ಯ ಹಾಗೂ ಅಸಾಧಾರಣ ಶ್ಲಾಘನೀಯ ಸೇವೆಯನ್ನು ಅವರು ನೀಡಿರುವುದು ನಮಗೆಲ್ಲ ಆದರ್ಶಪ್ರಾಯವಾಗಿದೆ. ಅವರ ಆಲೋಚನಾ ಕ್ರಮ, ಅವರ ಕಾರ್ಯವೈಖರಿ, ಅವರ ಕಾರ್ಯದಕ್ಷತೆ, ಅವರ ಕಾರ್ಯಕ್ಷಮತೆಗಳು ಭವಿಷ್ಯದ ವಿಶ್ವವಿದ್ಯಾಲಯದ ನಿರ್ಮಿತಿಗೆ ಸಹಕಾರಿಯಾಗಿವೆ. ವಿಶ್ವವಿದ್ಯಾಲಯ ಅವರ ಭೌತಿಕ ಶರೀರವನ್ನು ಕಳೆದುಕೊಂಡು ದುಃಖಿಸುತ್ತಿದೆ. ಅಲ್ಲದೆ ಅವರು ಹಚ್ಚಿಹೋದ ಬೆಳಕಿನ ಹಣತೆಯನ್ನು ಜತನದಿಂದ ಕಾಪಾಡಿಕೊಳ್ಳುತ್ತಿದೆ.

ಮಾನವ ಸಂಪನ್ಮೂಲದ ಪ್ರಾಮುಖ್ಯತೆಯನ್ನು ಅರಿತು ಬೋಧಕ-ಬೋಧಕೇತರ ಹುದ್ದೆಗಳಿಗೆ ಸರ್ಕಾರದಿಂದ ಅನುಮೋದನೆ ಪಡೆದುಕೊಂಡು ತುಂಬಿದ ಚಿರಕೀರ್ತಿ ಅವರಿಗೆ ಸಲ್ಲುತ್ತದೆ. ವಿಶ್ವವಿದ್ಯಾಲಯವನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಕಟ್ಟಬಯಸುವ ಅವರ ಸ್ಕೂಲ್ ಪರಿಕಲ್ಪನೆಯ ಮುನ್ನುಡಿಯು ಇತರ ವಿಶ್ವವಿದ್ಯಾಲಯಗಳಿಗೆ ಮಾದರಿಯಾಗಿದೆ. ಮಾನವೀಯತೆ, ಕಷ್ಟದಲ್ಲಿರುವವರಿಗೆ ಮಿಡಿಯುವ ಹೃದಯ, ಸಾತತ್ಯ ವಿಶ್ವವಿದ್ಯಾಲಯದ ಬೆಳವಣಿಗೆಯನ್ನೆ ಧ್ಯೇನಿಸುವ ಮನಸ್ಥಿತಿ ಅವರದ್ದಾಗಿತ್ತು. ಇಂತಹ ನೂರಾರು ಸದ್ಗುಣಗಳಿಂದ ತೂಗುತ್ತಿದ್ದ ಮಹಾನ್ ವ್ಯಕ್ತಿತ್ವದ ಆತ್ಮ ಶಿವರಾತ್ರಿಯ ಶುಭದಿನದಂದು ಪರಮಾತ್ಮನಲ್ಲಿ ಲೀನವಾದದ್ದು ಮತ್ತೊಂದು ಪವಾಡವೇ ಸರಿ. ಇಂತಹ ಸಂಕಲ್ಪ ವ್ಯಕ್ತಿತ್ವದ ಮಹಾನ್ ಚೇತನವು ಭೌತಿಕವಾಗಿ ನಮ್ಮೊಂದಿಗಿಲ್ಲ ನಿಜ. ಆದರೆ ಅವರ ಆದರ್ಶಗಳು ಸದಾ ನಮ್ಮೊಂದಿಗಿವೆ. ವಿಶ್ವವಿದ್ಯಾಲಯ ಇರುವವರೆಗೂ ವಿಶ್ವವಿದ್ಯಾಲಯದ ಪ್ರತಿ ಭೌತಿಕ ವಸ್ತು ಹಾಗೂ ಹೃದಯಗಳು ಅವರ ಹೆಸರನ್ನು ಜೀವಂತವಾಗಿರಿಸುತ್ತವೆ ಎನ್ನುವುದು ಸತ್ಯ ಸಂಗತಿ.

ಇವರ ಅಗಲಿಕೆಯ ನೋವನ್ನು ನಾವು ಸಹಿಸಿಕೊಳ್ಳುವುದು ಕಷ್ಟವಾಗಿದೆ. ಇನ್ನು ಅವರ ಕುಟುಂಬವರ್ಗ ಅವರ ಅಗಲಿಕೆಯ ನೋವಿನಿಂದ ಬಳಲುತ್ತಿರುವುದು ವಾಸ್ತವವು ಹಾಗೂ ಸಹಜವು ಕೂಡ. ಇಂತಹ ಸಂದರ್ಭದಲ್ಲಿ ಅವರ ಅಗಲಿಕೆಯ ನೋವನ್ನು ತಡೆದುಕೊಳ್ಳುವ ಶಕ್ತಿಯನ್ನು ಭಗವಂತ ಕರುಣಿಸಲಿ ಎಂದು ಒಮ್ಮತದಿಂದ ಸಿಂಡಿಕೇಟ್ ಸಭೆಯ ಎಲ್ಲ ಸದಸ್ಯರು ಗೌರವಯುತವಾಗಿ ಅವರ ಸೇವೆಯನ್ನು ಸ್ಮರಿಸಿ ಮತ್ತೊಮ್ಮೆ ಅಶ್ರುತರ್ಪಣವನ್ನು ಅರ್ಪಿಸಿ ಶ್ರದ್ಧಾಂಜಲಿಯನ್ನು ಸಲ್ಲಿಸುವೆವು.

ತದನಂತರ ಕುಲಸಚಿವರು ಮತ್ತೊಮ್ಮೆ ಸಭೆಯನ್ನು ಸ್ವಾಗತಿಸಿ ವಿಷಯ ಸೂಚಿಗಳನ್ನು ಪ್ರಸ್ತಾಪಿಸಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 62ನೇ ಸಾಮಾನ್ಯ ಸಿಂಡಿಕೇಟ್ ಹಾಗೂ 2020ನೇ ಸಾಲಿನ 02ನೇ ಸಿಂಡಿಕೇಟ್ ಸಭೆಯ ಕಾರ್ಯಸೂಚಿ ಅನುಗುಣವಾಗಿ ದಿನಾಂಕ 24-02-2020 ರಂದು ಕೈಗೊಂಡ ತೀರ್ಮಾನಗಳು.

ಕ್ರ.ಸಂ	ಸಂಖ್ಯೆ	ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು
1	2020/02/01	ಹಿಂದಿನ ಸಭೆಯ ಗೊತ್ತುವಳಿಗಳನ್ನು ಹಾಗೂ ಅನುಪಾಲನಾ ವರದಿಗಳನ್ನು ದೃಢೀಕರಣಕ್ಕಾಗಿ ಸಭೆಯ ಮುಂದಿಡುವುದು.
	ತೀರ್ಮಾನ	**ದಿನಾಂಕ 16-01-2020 ರಂದು ನಡೆದ ಸಾಮಾನ್ಯ ಸಿಂಡಿಕೇಟ್ ಸಭೆಯ ಗೊತ್ತುವಳಿಗಳ ಅನುಪಾಲನಾ ವರದಿಯನ್ನು ಸಿಂಡಿಕೇಟ್ ಸಭೆಯು ದೃಢೀಕರಿಸಿತು.**
2	2020/02/02	ವಿಶ್ವವಿದ್ಯಾಲಯದ ಆದಾಯ ತೆರಿಗೆ ಸಂದಾಯ ಮಾಡುವ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸುವ ಕುರಿತು.
	ತೀರ್ಮಾನ	**ವಿಶ್ವವಿದ್ಯಾಲಯದ ಆದಾಯ ತೆರಿಗೆ ಸಂದಾಯ ಮಾಡುವ ವಿಷಯದ ಬಗ್ಗೆ ಮಾನ್ಯ ಕುಲಪತಿಗಳು ಆದಾಯ ತೆರಿಗೆ ಗಂಭೀರತೆ ಹಾಗೂ ಪ್ರಾಧಾನ್ಯತೆಯ ಬಗ್ಗೆ ಸಭೆಯ ಮುಂದೆ ವಿವರಿಸಿದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 31-01-2020 ರಂದು ಸರಕಾರದ ನಿರ್ದೇಶನ ಬಯಸಿ ಪತ್ರವನ್ನು ಬರೆಯಲಾಯಿತು. ಸರಕಾರದಿಂದ ದಿನಾಂಕ 03-02-2020 ರಂದು ವಿಶ್ವವಿದ್ಯಾಲಯದ ಹಿತದೃಷ್ಟಿಯನ್ನು ರಕ್ಷಿಸುವ ನಿಟ್ಟಿನಲ್ಲಿ ನಿಯಮಾನುಸಾರ ಅಗತ್ಯ ಕ್ರಮಕೈಕೊಳ್ಳುವಂತೆ ಪತ್ರದ ಮೂಲಕ ಸರಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರು ವಿಶ್ವವಿದ್ಯಾಲಯಕ್ಕೆ ತಿಳಿಸಿರುತ್ತಾರೆ. ಆದಾಯ ತೆರಿಗೆ ಇಲಾಖೆಯಿಂದ ಬಂದ ನೋಟಿಸ್‌ಗಳನ್ನು ಹಾಗೂ ಸಿಂಡಿಕೇಟ್ ಮತ್ತು ಕೆನರಾ ಬ್ಯಾಂಕ ಖಾತೆಗಳ ಜಪ್ತಿ ನೋಟಿಸ್‌ಗಳನ್ನು ಸಭೆಯು ಪರಿಶೀಲಿಸಿತು. ಅದರಂತೆ, ಸಭೆಯು ಸದರಿ ವಿಷಯವನ್ನು ಸುಧೀರ್ಘವಾಗಿ ಚರ್ಚಿಸಿದ ನಂತರ, ಸರ್ಕಾರದ ನಿರ್ದೇಶನದಂತೆ, ಆದಾಯ ತೆರಿಗೆ ಇಲಾಖೆಗೆ ಪಾವತಿಸಬೇಕಾದ ಮೊತ್ತ ರೂ. 8,60,78,060/- ಗಳಿಗೆ ಶೇ. 20 ರಷ್ಟು ತೆರಿಗೆ ನೀಡಲು ಒಮ್ಮತದಿಂದ ಒಪ್ಪಿಗೆ ಸೂಚಿಸಿತು.**
3	2020/02/03	ವಿಜಯಪುರ ಸ್ನಾತಕೋತ್ತರ ಕೇಂದ್ರದಲ್ಲಿ ಗಣಿತ ಹಾಗೂ ಜೀವ ವಿಜ್ಞಾನ, ಸೂಕ್ಷ್ಮ ಜೀವವಿಜ್ಞಾನ/ಜೈವಿಕ ತಂತ್ರಜ್ಞಾನ ವಿಷಯಗಳನ್ನು ಹೊಸದಾಗಿ ಪ್ರಾರಂಭಿಸುವ ಕುರಿತು.
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ ವಿಜಯಪುರಕ್ಕೆ 'ಎಎಎ' ಸಮಿತಿಯು ಭೇಟಿ ನೀಡಿ ಸ್ನಾತಕೋತ್ತರ ಕೇಂದ್ರ ವಿಜಯಪುರದಲ್ಲಿ ಹೊಸ ಸ್ನಾತಕೋತ್ತರ ಕೋರ್ಸಗಳನ್ನು ಪ್ರಾರಂಭಿಸಲು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ, ಸಿಂಡಿಕೇಟ್ ಸಭೆಯು ಎಂ.ಬಿ.ಎ. ಹಾಗೂ ಗಣಿತಶಾಸ್ತ್ರ ವಿಷಯಗಳ ಕೋರ್ಸಗಳನ್ನು ಪ್ರಾರಂಭಗೊಳಿಸಲು ಅನುಮತಿ ನೀಡಿತು ಹಾಗೂ ಸರಕಾರದ ಅನುಮೋದನೆಗಾಗಿ ಪತ್ರ ಬರೆಯಲು ಸೂಚಿಸಿತು.**
4	2020/02/04	ಜೆ.ಎಸ್.ಎಸ್. ಮಹಾವಿದ್ಯಾಲಯ, ಬೆಳಗಾವಿ ಇವರ ಕೋರಿಕೆ ಮೇರೆಗೆ ತಮ್ಮ ಮಹಾವಿದ್ಯಾಲಯದಲ್ಲಿ ಪ್ರಾಣಿಶಾಸ್ತ್ರ ವಿಷಯವನ್ನು ಪ್ರಾರಂಭಿಸಲು ಅನುಮೋದನೆ ನೀಡುವ ಕುರಿತು.
	ತೀರ್ಮಾನ	**ಗೋವಿಂದರಾಮ ಸೆಕ್ಸರಿಯಾ ವಿಜ್ಞಾನ ಮಹಾವಿದ್ಯಾಲಯ, ಬೆಳಗಾವಿ ಇವರು 2020-21 ನೇ ಶೈಕ್ಷಣಿಕ ಸಾಲಿನಿಂದ ತಮ್ಮ ಆಡಳಿತ ಮಂಡಳಿಯಿಂದ ಅನುಮೋದನೆ ಪಡೆದುಕೊಂಡು ಸ್ನಾತಕೋತ್ತರ ಪ್ರಾಣಿಶಾಸ್ತ್ರ ಕೋರ್ಸನ್ನು ಪ್ರಾರಂಭಿಸುವ ಕುರಿತಂತೆ, ವಿಶ್ವವಿದ್ಯಾಲಯಕ್ಕೆ ಮನವಿಯನ್ನು ಸಲ್ಲಿಸಿರುವ ಹಿನ್ನೆಲೆಯಲ್ಲಿ ಸಿಂಡಿಕೇಟ್ ಸಭೆಯು ಸ್ನಾತಕೋತ್ತರ ಪ್ರಾಣಿಶಾಸ್ತ್ರ ಕೋರ್ಸನ್ನು ಪ್ರಾರಂಭಿಸಲು ಅನುಮೋದನೆ ನೀಡಿತು.**

5	2020/02/05	ಎಸ್.ಸಿ.ಪಿ./ಟಿ.ಎಸ್.ಪಿ. ಯೋಜನೆ ಅಡಿಯಲ್ಲಿ ವಿದ್ಯಾರ್ಥಿಗಳಿಗಾಗಿ Laptops ಖರೀದಿಸಲು ಟೆಂಡರ್ ಮುಖಾಂತರ ಪ್ರಕ್ರಿಯೆ ಜಾರಿಗೊಳಿಸಲು ಅನುಮೋದನೆ ನೀಡುವ ಕುರಿತು.
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿರುವ ಎಸ್.ಪಿ./ಎಸ್.ಟಿ ವಿದ್ಯಾರ್ಥಿಗಳಿಗಾಗಿ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಯೋಜನೆ ಅಡಿಯಲ್ಲಿ ವಿದ್ಯಾರ್ಥಿಗಳಿಗಾಗಿ Laptops ಗಳ ಖರೀದಿಗಾಗಿ ಇ-ಟೆಂಡರ್ ಮುಖಾಂತರ ಪ್ರಕ್ರಿಯೆ ಜಾರಿಗೊಳಿಸಲು ಸಭೆಯ ಅನುಮೋದನೆ ನೀಡಿತು.**
6	2020/02/06	ಕು.ಮೋನಿಕಾ ಬಸವರಾಜ ಕಣ್ಣಿ ಶಿಕ್ಷಣ ಮಹಾವಿದ್ಯಾಲಯ ಇವರು ನಡೆಸುತ್ತಿರುವ ಮಹಾವಿದ್ಯಾಲಯದ ಜಾಗದ ಬಗ್ಗೆ ಇರುವ ಆಕ್ಷೇಪಣೆ ಸಂಬಂಧಿಸಿದಂತೆ 2019-20 ನೇ ಸಾಲಿಗೆ ವಿಧಿಸಬಹುದಾದ ದಂಡದ ಕುರಿತು.
	ತೀರ್ಮಾನ	**ಶ್ರೀ ಸಿದ್ದಲಿಂಗೇಶ್ವರ ವಿದ್ಯಾವರ್ಧಕ ಸಂಘದ ಕು.ಮೋನಿಕಾ ಬಸವರಾಜ ಕಣ್ಣಿ ಶಿಕ್ಷಣ ಮಹಾವಿದ್ಯಾಲಯ ಇವರು ನಡೆಸುತ್ತಿರುವ ಮಹಾವಿದ್ಯಾಲಯದ ಜಾಗದ ಬಗ್ಗೆ ಇರುವ ಆಕ್ಷೇಪಣೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ಸತ್ಯಶೋಧನಾ ಸಮಿತಿಯವರು ಪರಿಶೀಲನೆ ಮಾಡಿ ಸಲ್ಲಿಸಿರುವ ವರದಿಯನ್ನು ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಯಿತು. ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಸಮಿತಿಯು ನೀಡಿರುವ ವರದಿಯ ಶಿಫಾರಸ್ಸುಗಳನ್ನು ಪೂರೈಸುವವರೆಗೂ ಮುಂದಿನ ಶೈಕ್ಷಣಿಕ ವರ್ಷಕ್ಕಾಗಿ ಪ್ರವೇಶಾತಿಯನ್ನು ತೆಗೆದುಕೊಳ್ಳಬಾರದೆಂದು ಸೂಚಿಸಿತು ಆದರೆ, 2019-20 ನೇ ಸಾಲಿಗೆ ಸದರಿ ಮಹಾವಿದ್ಯಾಲಯ ಆಡಳಿತ ಮಂಡಳಿಯವರಿಗೆ ವಿಧಿಸಬಹುದಾದ ದಂಡದ ಕುರಿತು ನಿರ್ದೇಶನ ನೀಡಿರಲ್ಲಿಲ.** **ಮುಂದುವರೆದು, 2019-20 ನೇ ಸಾಲಿಗೆ ಸದರಿ ಮಹಾವಿದ್ಯಾಲಯ ಆಡಳಿತ ಮಂಡಳಿಯವರಿಗೆ ರೂ.2 ಲಕ್ಷಗಳ ದಂಡವನ್ನು ವಿಧಿಸಲು ಸಿಂಡಿಕೇಟ್ ಸಭೆಯು ನಿರ್ದೇಶಿಸಿತು.**
7	2020/02/07	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸಂಚಿತ ವೇತನ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಬೋಧಕೇತರ ಸಿಬ್ಬಂದಿಗಳಿಗೆ ಪರಿಷ್ಕೃತ ವೇತನ ನಿಗದಿಪಡಿಸಲು ರಚಿಸಲಾದ ಸಮಿತಿ ಸಭೆಯ ನಡಾವಳಿಗಳಿಗೆ ಅನುಮೋದನೆ ನೀಡುವ ಕುರಿತು.
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸಂಚಿತ ವೇತನ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಬೋಧಕೇತರ ಸಿಬ್ಬಂದಿಗಳಿಗೆ ಪ್ರಸ್ತುತ ನೀಡುತ್ತಿರುವ 6ನೇ ವೇತನದ ಮೂಲ ವೇತನಕ್ಕೆ 80% ರಷ್ಟು ಹೆಚ್ಚು ಮಾಡಿ, ಜನವರಿ 2020 ರಿಂದ ಜಾರಿಗೆ ಬರುವಂತೆ, ವೇತನ ನೀಡಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.**
8	2020/02/08	ದಿನಾಂಕ 17-02-2020 ರಂದು ಬೆಂಗಳೂರಿನಲ್ಲಿ ನಡೆದ ಹಣಕಾಸು ಸಮಿತಿ ಸಭೆಯ ನಡಾವಳಿಗಳಿಗೆ ಅನುಮೋದನೆ ನೀಡುವ ಕುರಿತು.
	ತೀರ್ಮಾನ	**ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಆವರಣದಲ್ಲಿ ದಿನಾಂಕ 17-02-2020 ರಂದು ನಡೆದ ಹಣಕಾಸು ಸಮಿತಿ ಸಭೆಯ ನಡಾವಳಿಗಳಿಗೆ ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.**
	ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರ ಚರ್ಚಿಸುವ ವಿಷಯಗಳು.	
I	2020/02/I	ರಾಣಿ ಚನ್ನಮ್ಮ ಅಧ್ಯಯನ ಪೀಠ ಹಾಗೂ ಸಂಗೊಳ್ಳಿ ರಾಯಣ್ಣ ಅಧ್ಯಯನ ಪೀಠಗಳ ಕರಡು ಪರಿನಿಯಮಾವಳಿಗಳಿಗೆ ಅನುಮೋದನೆ ನೀಡುವ ಕುರಿತು.
	ತೀರ್ಮಾನ	**ರಾಣಿ ಚನ್ನಮ್ಮ ಅಧ್ಯಯನ ಪೀಠ ಹಾಗೂ ಸಂಗೊಳ್ಳಿ ರಾಯಣ್ಣ ಅಧ್ಯಯನ ಪೀಠಗಳ ಕರಡು ಪರಿನಿಯಮಾವಳಿಗಳನ್ನು ಸಭೆಯಲ್ಲಿ ಮಂಡಿಸಲಾಯಿತು. ಸಭೆಯು ಸದರಿ ಕರಡು ಪರಿನಿಯಮಾವಳಿಗಳನ್ನು, ಸಮಿತಿಗೆ (Statute Committee) ಸಲ್ಲಿಸಲು ಸೂಚಿಸಿತು.**
II	2020/02/II	ಪ್ರೊ. ಪೂರ್ಣಿಮಾ ಪಟ್ಟಣಶೆಟ್ಟಿ, ಪ್ರಾಧ್ಯಾಪಕರು, ಶಿಕ್ಷಣ ವಿಭಾಗ ಇವರು ವಯೋನಿವೃತ್ತಿ ಹೊಂದುತ್ತಿರುವ ಕುರಿತು.
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಪೂರ್ಣಿಮಾ ಪಟ್ಟಣಶೆಟ್ಟಿ ಇವರು 30-06-2020 ರಂದು ವಯೋನಿವೃತ್ತಿ ಹೊಂದುತ್ತಿರುವ ಹಿನ್ನೆಲೆಯಲ್ಲಿ, ಅವರ ಸೇವಾ ನಿವೃತ್ತಿ ನೋಟಿಸ್ ನೀಡಲು ಹಾಗೂ ಏಪ್ರಿಲ್ 2020 ರಿಂದ ಎನ್.ಪಿ.ಎಸ್. ಮೊತ್ತ ಕಟಾವಣೆ ಮಾಡದಂತೆ ಹಣಕಾಸು ಅಧಿಕಾರಿಗಳಿಗೆ ತಿಳಿಸಿ ಕೆ.ಸಿ.ಎಸ್.ಆರ್. ನಿಯಮದ ಪ್ರಕಾರ ಮುಂದಿನ ಕ್ರಮಕೈಕೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.**

III	2020/02/III	Mass Dictation ಕುರಿತು ರಚಿಸಲಾದ ವಿಶೇಷ ಸಮಿತಿಯ ವರದಿಗೆ ನಿರ್ದೇಶನ ನೀಡುವ ಕುರಿತು.
	ತೀರ್ಮಾನ	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕ ಪರೀಕ್ಷೆಗಳು ನವೆಂಬರ್/ಡಿಸೆಂಬರ್-2019 ರಲ್ಲಿ ಜರುಗಿದವು. ಸದರಿ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಸಂದರ್ಭದಲ್ಲಿ ಇಂಗ್ಲೀಷ್ ವಿಷಯದ ಮೌಲ್ಯಮಾಪನ ಮಾಡುವಾಗ ಒಂದು ಪ್ರಾಕೇಟ್‌ನಲ್ಲಿನ ಎಲ್ಲಾ ಉತ್ತರ ಪತ್ರಿಕೆಗಳನ್ನು ಪರಿಶೀಲಿಸಿದಾಗ, Mass Dictation, ಪರೀಕ್ಷಾ ಅಕ್ರಮ ಆಗಿರಬಹುದೆಂದು ಮೌಲ್ಯಮಾಪನ ಕೇಂದ್ರದ ಮುಖ್ಯ ಅಧೀಕ್ಷಕರು ಪತ್ರ ಬೆರದು ಕುಲಸಚಿವರು(ಮೌ) ಇವರ ಗಮನಕ್ಕೆ ತಂದಿರುತ್ತಾರೆ. ಸದರಿ ಆರೋಪಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಚರ್ಚಿಸಲಾಯಿತು. ಸಭೆಯು ಇಂಗ್ಲೀಷ್ ವಿಷಯದ ಎಲ್ಲ ಪ್ರಾಕೇಟ್‌ನ ಉತ್ತರ ಪತ್ರಿಕೆಗಳನ್ನು ಮರು ಮೌಲ್ಯಮಾಪನ ಮಾಡಿಸಿ, ಮುಂದಿನ ಸಭೆಯಲ್ಲಿ ಸದರಿ ವರದಿಯನ್ನು ಮಂಡಿಸಲು ಸೂಚಿಸಿತು.
IV	2020/02/IV	ಸಿಂಡಿಕೇಟ್ ಸಭೆಯಲ್ಲಿ ವಿಶ್ವವಿದ್ಯಾಲಯದಲ್ಲಿರುವ ವಿವಿಧ ಸಮಿತಿಗಳ ಬಗ್ಗೆ ಚರ್ಚಿಸಲಾಯಿತು. ಚರ್ಚೆಯ ನಂತರ ಸಮಿತಿಗಳನ್ನು ಪುನರ್ ರಚಿಸಿ ಈ ಕೆಳಕಾಣಿಸಿದಂತೆ ವಿವಿಧ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಲಾಯಿತು. ಕ್ರ ಸ — ಸಮಿತಿಗಳು — ಸದಸ್ಯರು 1 — ಖರೀದಿ ಸಮಿತಿ — 1. ಡಾ. ಆನಂದ್ ಹೊಸೂರ್ 2. ಕು. ಶೋಭಾ ಹೂಗಾರ್‌ಶ್ರೀ 3. ಹನುಮಂತಪ್ಪ ಎಸ್. ಶಿಗ್ಗಾಂವ್ 2 — ಹಣಕಾಸು ಸಮಿತಿ — 1. ಡಾ. ಕೆ. ಶೇಷಮೂರ್ತಿ 3 — ವಿದ್ಯಾರ್ಥಿ ಕಲ್ಯಾಣ ಸಮಿತಿ — 1. ಕು. ಶೋಭಾ ಹೂಗಾರ್ 2. ಶ್ರೀ ಅಶೋಕ ಕೆ. ಕಬ್ಬೇರ್ 4 — ವೈದ್ಯಕೀಯ ವೆಚ್ಚ ಪರಿಶೀಲನಾ ಸಮಿತಿ — 1. ಡಾ. ಆನಂದ್ ಹೊಸೂರ್ 2. ಶ್ರೀ ಕಿರಣಕುಮಾರ್ ಡಿ. ದೇಸಾಯಿ 5 — Works ಸಮಿತಿ — 1. ಶ್ರೀ ಅಶೋಕ ಕೆ. ಕಬ್ಬೇರ್ 2. ಶ್ರೀ ಕಿರಣಕುಮಾರ್ ಡಿ. ದೇಸಾಯಿ
V	2020/02/V	ಮಲಯಾ ವಿಶ್ವವಿದ್ಯಾಲಯ, ಮಲೇಷ್ಯಾ ಮತ್ತು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ ನಡುವೆ ಸ್ಕೋಪ್ ಮತ್ತು ಆಡಳಿತಾತ್ಮಕ ಕಾರ್ಯಚರಣೆಗಳ ಕ್ಷೇತ್ರಗಳಲ್ಲಿ ಸಹಕಾರಕ್ಕಾಗಿ ಎರಡು ವಿಶ್ವವಿದ್ಯಾಲಯದ ನಡುವೆ ಒಡಂಬಡಿಕೆ ಮಾಡಿಕೊಳ್ಳುವ ವಿಷಯವನ್ನು ಸಭೆಯ ಮುಂದೆ ಮಂಡಿಸಲಾಯಿತು. ಸದರಿ ಎರಡು ವಿಶ್ವವಿದ್ಯಾಲಯದ ನಡುವೆ 'MoU' ಮಾಡಿಕೊಳ್ಳಲು ಸಭೆಯು ಅನುಮೋದನೆ ನೀಡಿತು.
VI	2020/02/VI	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ ವಿಜಯಪುರದ ಆವರಣದಲ್ಲಿ ಕಂಪೌಡ್ ಗೋಡೆ ನಿರ್ಮಾಣ ಮಾಡುವ ಕುರಿತಂತೆ ಸಭೆಯಲ್ಲಿ ಚರ್ಚಿಸಲಾಯಿತು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಾಗೂ ಸ್ನಾತಕೋತ್ತರ ಕೇಂದ್ರದ ಸುರಕ್ಷತೆಗಾಗಿ ಕಂಪೌಡ್ ಗೋಡೆ ನಿರ್ಮಾಣ ಮಾಡುವ ಅವಶ್ಯಕತೆ ಇರುವುದರಿಂದ ಸದರಿ ನಿರ್ಮಾಣ ಕಾಮಗಾರಿಯನ್ನು ನಿರ್ವಹಿಸಲು ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ, ವಿಜಯಪುರ ಇವರಿಂದ ಕೈಕೊಳ್ಳಲು ಸಭೆಯು ಅನುಮತಿ ನೀಡಿತು.

ಕೊನೆಯದಾಗಿ ಕುಲಸಚಿವರು(ಮೌ) ಇವರು ಎಲ್ಲ ಸದಸ್ಯರುಗಳಿಗೆ ವಂದನೆಯನ್ನು ಸಲ್ಲಿಸುವುದರ ಮೂಲಕ ಸಭೆಯು ಸಂಪನ್ನಗೊಂಡಿತು.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು — ಕುಲಪತಿಗಳು ಹಾಗೂ ಅಧ್ಯಕ್ಷರು

ಇವರಿಗೆ,

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಗೌರವಾನ್ವಿತ ಸಿಂಡಿಕೇಟ್ ಸದಸ್ಯರುಗಳಿಗೆ.